ಪ್ರೊ: ಎಂ.ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಭಾರತೀಯ ದಂಡಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಯಿತು*

೨, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ (ಪ್ರಾಧಿಕಾರ ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಟಿ. ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ,

೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು

(ಪ್ರಸ್ತಾಪ ಅಂಗೀಕಾರವಾಯಿತು, ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು)

ಶ್ರೀ ಟಿ.ಎಂ. ಮಂಜುನಾಥ್.— ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— * ವಿಧೇಯಕವನ್ನು ಮಂಡಿಸಲಾಯಿತು. *

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಎಂ. ಮಂಜುನಾಥ್.— ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಹಾಗೂ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ

೧೯೯೦ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು

† ಶ್ರೀ ಟಿ.ಎಂ. ಮಂಜುನಾಥ್ (ಶಿಪಟೂರು).— ಮಾನ್ಯ ಅಧ್ಯಕ್ಷರೇ, ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸುತ್ತಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಏನಿದೆ ಇದು ೧೯೭೬ನೇ ಇಸವಿಯಿಂದ ಬೆಂಗಳೂರು ನಗರದಲ್ಲಿರತಕ್ಕಂಥ ಸೈಟ್‌ಗಳನ್ನು ವಿಲೇವಾರಿ ಮಾಡತಕ್ಕ ಬಗ್ಗೆ ಕೆಲವಾರು ಕಾನೂನುಗಳನ್ನು ಆಕ್ಟ್‌ಗಳನ್ನು ಮಾಡಿದ್ದಾರೆ. ಆದರೆ ಇದರಲ್ಲಿ ಸಿ.ಎ. ಸೈಟ್‌ಗಳು ಏನಿವೆ ಇದರ ಬಗ್ಗೆ ೧೯೮೨ನೇ ಇಸವಿಯಲ್ಲಿ ಒಂದು ತಿದ್ದುಪಡಿ ತರಲಾಯಿತು. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಆಸ್ಪತ್ರೆಗಳು, ಪೋಲೀಸ್ ಸ್ಟೇಷನ್‌ಗಳು ಮತ್ತು ಪಾಠಶಾಲೆಗಳು ಹಾಗೂ ಆಧ್ಯಾತ್ಮಿಕ ಕೇಂದ್ರಗಳಿಗೆ ಈ ಸಿ.ಎ. ಸೈಟ್‌ಗಳನ್ನು ಕೊಡಬೇಕೆಂಬ ಒಂದು ತಿದ್ದುಪಡಿ ಆಗ ತಂದಿದ್ದರು. ಆದರೆ ೧೯೮೪ನೇ ಇಸವಿಯಲ್ಲಿ ಹೀಗೆ ಮಾಡಬಾರದೆಂದು ಒಂದು ವಿಧೇಯಕವನ್ನು ತಂದಂ ಆಗಿನ ಸರಕಾರ ಅದನ್ನು ನಿಲ್ಲಿಸಿತು. ಹಾಗೆ ನಿಲ್ಲಿಸಿದರೂ ಸಹ ೧೯೮೪ನೇ ಇಸವಿಯಿಂದೀಚೆಗೆ ಸಾರ್ವಜನಿಕರ ಶ್ರೇಯಸ್ಸಿಗಾಗೋಸ್ಕರ ಅಂದರೆ ಆಸ್ಪತ್ರೆ ಕಟ್ಟುವುದಕ್ಕೆ ಉಳಿದಂತೆ ದೇವಸ್ಥಾನಗಳನ್ನು ಕಟ್ಟುವುದಕ್ಕೆ ಸಾಂಸ್ಕೃತಿಕ ಕಟ್ಟಡಗಳನ್ನು ಕಟ್ಟುವುದಕ್ಕೆ ಆಧ್ಯಾತ್ಮಿಕ ಕಟ್ಟಡಗಳನ್ನು ಕಟ್ಟುವುದಕ್ಕೆ ಈ ರೀತಿ ಸುಮಾರು ೪೮ ಸಂಸ್ಥೆಗಳಿಗೆ ಈಗಾಗಲೇ ಕೊಟ್ಟು ಬಿಟ್ಟಿದ್ದಾರೆ. ಹೀಗೆ ಪಡೆದಿರತಕ್ಕಂಥವರು ಏನು ಮಾಡಿದ್ದಾರೆಂದರೆ ಈಗಾಗಲೇ ಲೈಸೆನ್ಸ್ ಪಡೆದು ಕಟ್ಟಡಗಳನ್ನು ಕಟ್ಟಿದ್ದಾರೆ ದೇವಸ್ಥಾನಗಳನ್ನು ಕಟ್ಟಿದ್ದಾರೆ. ಪಾಠಶಾಲೆಗಳನ್ನು ಕಟ್ಟಿದ್ದಾರೆ. ಆಮೇಲೆ ೧೯೮೬ನೇ ಇಸವಿಯಲ್ಲಿ ಅವರು ಒಂದು ತಿದ್ದುಪಡಿಯನ್ನು ತಂದರು. ಇದನ್ನೆಲ್ಲಾ

* ಅನುಬಂಧ *

ವಿತ್ ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಆಗಿ ಜಾರಿಗೆ ಕೊಟ್ಟು ಇದು ಪೂರ್ಣವಾಗಿ ಅವರಿಗೆ ಅನುಕೂಲವಾಗ ಬೇಕೆಂದು ತಂದಂತಹ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಇದಕ್ಕೆ ಒಂದು ಸೇವ್ ಕ್ಲಾಜ್ ತರದೆ ಇದ್ದುದರ ದೃಷ್ಟಿಯಿಂದ ಇವತ್ತು ಆಡಚಣೆ ಆಗಿದೆ. ಇಂದು ಸಾರ್ವಜನಿಕರು ತೆಗೆದುಕೊಂಡಿರುತಕ್ಕಂಥ ಕಟ್ಟಡಗಳು ಇವತ್ತಿನ ದಿವಸ ಅದರಿಂದ ಉಪಯೋಗ ಪಡೆದುಕೊಳ್ಳುತಕ್ಕಂಥದ್ದಕ್ಕೆ ಕೋರ್ಟ್‌ಗಳಲ್ಲಿ ಅನುವಂತಿ ಸಿಗುತ್ತಿಲ್ಲ. ಈ ಒಂದು ದೃಷ್ಟಿಯಿಂದ ಈ ಒಂದು ತಿದ್ದುಪಡಿಗೆ ಸೇವ್ ಕ್ಲಾಜ್ ತರಬೇಕೆನ್ನುವ ದೃಷ್ಟಿಯಿಂದ ನಾನು ಇದನ್ನು ತಂದಿದ್ದೇನೆ. ಸರ್ಕಾರದಲ್ಲಿ ಸಹ ಈ ಬಗ್ಗೆ ಪರ್ಯಾಲೋಚನೆ ಮಾಡುತ್ತಿದ್ದಾರೆ. ಈಗ ಇದನ್ನು ಪಾಸ್ ಮಾಡುವುದರಿಂದ ಸರ್ಕಾರಕ್ಕೆ ತೊಂದರೆ ಏನೂ ಆಗುವುದಿಲ್ಲ. ಅದಕ್ಕಾಗಿ ದಯಮಾಡಿ ಈ ತಿದ್ದುಪಡಿಯನ್ನು ಈ ಸಭೆ ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ನಂಜುಂಡಸ್ವಾಮಿ ಯವರು ಸಹ ಮಾತನಾಡುತ್ತಾರೆ.

ಶ್ರೀ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ರೂರಲ್).— ಮಾನ್ಯ ಅಧ್ಯಕ್ಷರೇ, ಈ ಹಿಂದೆ ಜನತಾ ದಳ ಸರ್ಕಾರ ಮಾಡಿದಂತಹ ಒಂದು ತಪ್ಪನ್ನು ಸರಿ ಮಾಡುವುದಕ್ಕೆ ಮಾಡಿದಂತಹ ಒಂದು ಪ್ರಯತ್ನ ಇದಾಗಿದೆ. ಇದನ್ನು ಈ ಕೂಡಲೇ ಈ ಸಭೆ ಸರ್ವಾನುಮತದಿಂದ ಏತಕ್ಕೆ ಒಪ್ಪಬೇಕೆಂದು ಹಿಂದಿನ ಸರ್ಕಾರ ಮಾಡಿದಂತಹ ತಪ್ಪಿನ ಕಾರಣದಿಂದಾಗಿ ನಮ್ಮ ರಾಜ್ಯದ ಉಚ್ಚ ನ್ಯಾಯಾಲಯಗಳಲ್ಲಿ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡಿ ಕಟ್ಟಡಗಳನ್ನು ಏನು ಕಟ್ಟಲಾಗಿದೆ ಅಂತಹ ಕಟ್ಟಡಗಳನ್ನು ಹರಾಜು ಹಾಕುವುದಕ್ಕೆ ಆಜ್ಞೆಗಳನ್ನು ಕೊಟ್ಟಿದೆ. ಈ ಹಿಂದಿನ ಸರ್ಕಾರ ಉದ್ದೇಶಪೂರ್ವಕ ವಾಗಿ ಮಾಡಿದಂತಹ ತಪ್ಪು ಅಲ್ಲ ಅಲ್ಲಿ ಈ ಒಂದು ಸೇವಿಂಗ್ ಕ್ಲಾಜ್ ಇರಲಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಈ ಒಂದು ತಿದ್ದುಪಡಿ ತರಲಾಗಿದೆ. ಈ ಕಾರಣದಿಂದ ಎಲ್ಲಾ ಸದಸ್ಯರು ಇದನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಇವತ್ತೆ ಆದರೆ ಒಳ್ಳೆಯದು.

ಶ್ರೀ ಪಿ ಜೆ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಂಜುನಾಥ್ ರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ವಿಧೇಯಕವನ್ನು ಏನು ಮಂಡಿಸಿದ್ದಾರೆ. ನಾನು ಇದನ್ನು ಸ್ವಾಗತ ಮಾಡಿ, ನನ್ನ ಕಡೆಯಿಂದ ಇದನ್ನು ಬೆಂಬಲಿಸಿ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಏನು ಇದೆ, ಈ ಅಥಾರಿಟಿ ಯಾವ ಒಂದು ಒಳ್ಳೆಯ ಉದ್ದೇಶದಿಂದ ಮಾಡಿದ್ದೇವೆ. ಆ ಒಂದು ಉದ್ದೇಶವನ್ನು ಕಾರ್ಯಗತ ಮಾಡುವುದರಲ್ಲಿ ಸಫಲವಾಗಿದೆ ಎಂದು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಹಿಂದೆ ಸಿ ಐ ಟಿ ಬಿ ಎಂದು ಇತ್ತು. ಅದಾದ ಮೇಲೆ ಬಿ.ಡಿ.ಎ. ಆಯಿತು. ಈ ಬಿ ಡಿ.ಎ. ಯಾವ ಮೇಗದಲ್ಲಿ ಯಾವ ಪ್ರಮಾಣದಲ್ಲಿ ಕೆಲಸ ಮಾಡಬೆ ಕಾಗಿತ್ತೋ ಆ ಪ್ರಮಾಣದಲ್ಲಿ ಕೆಲಸ ಮಾಡಲಿಕ್ಕೆ ಆಗುತ್ತಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಅದನ್ನು ನಾನು ವಿಶ್ಲೇಷಣೆ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಇವತ್ತು ಈ ಸಿ.ಎ. ಸೈಟ್‌ಗಳು ಏನು ಇವೆ, ಈ ಸಿ.ಎ. ಸೈಟುಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಒಂದು ಒಳ್ಳೆಯ ಉದ್ದೇಶದಿಂದ ಮಾಡಿರುತ್ತಾರೆ. ಆದರೆ ಯಾರು ಅಧಿಕಾರಕ್ಕೆ ಬರುತ್ತಾರೆ, ಆ ಜನರು ಅವರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿರ ತಕ್ಕಂಥಾದ್ದನ್ನು ನಮಗೆಲ್ಲರಿಗೂ ಗೊತ್ತಿರತಕ್ಕಂಥಾದ್ದು. ಅನೇಕ ರಾಜಕೀಯ ಒತ್ತಡಗಳಿಗೆ, ಅನೇಕ ಪ್ರಭಾವಗಳಿಗೆ ಒಳಗಾಗಿ ಯಾವ ಉದ್ದೇಶದಿಂದ ಈ ಸಿ.ಎ. ಸೈಟ್‌ಗಳನ್ನು ಮಾಡಿದ್ದೇವೆ ಅದನ್ನು ಅದಕ್ಕಾಗಿಯೇ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ.

ಈಗ ತಮಗೆ ಗೊತ್ತಿರುವ ಹಾಗೆ ಈ ಸಿ.ಎ. ಸೈಟ್‌ಗಳ ಬಗ್ಗೆ ನಾನು ಸಾರಿಗೆ ಮಂತ್ರಿ ಆಗಿದ್ದಂಥ ಸಂದರ್ಭದಲ್ಲಿ ಸಹಾ ನೋಡಿದ್ದೇನೆ. ಬೆಂಗಳೂರು ಸುತ್ತಮುತ್ತ ಹೊಸ ಬಡಾವಣೆಗಳನ್ನು ಏನು ಮಾಡುತ್ತಾರೆ, ಅಲ್ಲಿ ಬಸ್‌ಗಳನ್ನು ಓಲ್ಲಿಸುವುದಕ್ಕೆ ಸಹಿತ ಜಾಗಗಳನ್ನು ಇಟ್ಟಿಲ್ಲ, ಈಗ ಬೆಂಗಳೂರು ನಗರದಲ್ಲಿ ವಾಹನಗಳ ಓಡಾಟ ಹೆಚ್ಚಾಗಿ ದಿನಕ್ಕೆ ಒಬ್ಬರಾದರೂ ಸಹಿತ ಮೋಟಾರು ವಾಹನ ಅಪಘಾತದಲ್ಲಿ ಸಾಯುತ್ತಾರೆ. ತಿಂಗಳ್ಲೇ ಸತ್ತರೆ ಮಾತ್ರ ನಮಗೆ ಗೊತ್ತಾಗುತ್ತದೆ. ತುಂಬಾ ಗಾಯಗಳಾಗಿ ನಿಜವಾದ ಅಸ್ಪತ್ರೆಯಲ್ಲಿ ಎಷ್ಟು ಜನ ಸಾಯುತ್ತಾರೆಂದು ನಮಗೆ ಗೊತ್ತಾಗುವುದಿಲ್ಲ. ಇದರ ಜೊತೆಗೆ ವಾಹನ ಅಪಘಾತಗಳಿಂದ ಅನೇಕ ಜನ ಅಂಗವಿಕಲರಾಗುತ್ತಿದ್ದಾರೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಸುಮಾರು ೯೦೦ ಅಥವಾ ೧೦೦೦ ಬಿ. ಟಿ. ಎಸ್ ಬಸ್‌ಗಳು ದಿನನಿತ್ಯ ಓಡಾಡುತ್ತಿವೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಬೆಂಗಳೂರು ನಗರಕ್ಕೆ ಬೇಕಾಗಿದೆ. ಪೀಕ್-ಹವರ್ಸ್‌ನಲ್ಲಿ ಜನರು ಯಾವ ರೀತಿ ಪ್ರಯಾಣ ಮಾಡುತ್ತಿದ್ದಾರೆಂದು ನಮಗೆ ಗೊತ್ತಿರತಕ್ಕಂಥ

ವಿಚಾರ. ಆದರೆ, ಬಸ್‌ಗಳನ್ನು ಹೆಚ್ಚಿಗೆ ಬಿಡಬೇಕಾದರೆ ಹಳೆಯ ರಸ್ತೆಗಳನ್ನು ಅಗಲ ಮಾಡುವುದಕ್ಕೆ ನಮಗೆ ಆಗುತ್ತಿಲ್ಲ, ಹೊಸ ರಸ್ತೆಗಳನ್ನು ಮಾಡುವ ಕಡೆ ಸಾಕಷ್ಟು ಜಾಗವನ್ನು ಬಿಡಲು ಆಗುತ್ತಿಲ್ಲ. ಆ ಕಡೆ ಜಯನಗರದಲ್ಲಿ, ಮತ್ತೆ ಶಿವಾಜಿನಗರದಲ್ಲಿ ಹಾಗೂ ಮಾರ್ಕೆಟ್‌ನಲ್ಲಿ ಇರುವ ಬಸ್ ನಿಲ್ದಾಣಗಳನ್ನು ಬಿಟ್ಟರೆ ಬಿ.ಟಿ.ಎಸ್.ಗೆ ಬೇರೆ ಕಡೆ ನಿಲ್ದಾಣ ಮಾಡಿ ಕೊಡಲು ಅವಕಾಶವಾಗುತ್ತಿಲ್ಲ. ನಾನು ಸರ್ಕಾರದಲ್ಲಿ ಸಾರಿಗೆ ಮಂತ್ರಿಯಾಗಿದ್ದಾಗ ಬಿ ಡಿ.ಎ. ಅಧಿಕಾರಿಗಳನ್ನು ಹಲವಾರು ಸಾರಿ ಕರೆದು ಹೊಸ ಬಡಾವಣೆಗಳಲ್ಲಿ ಬಸ್ ನಿಲ್ದಾಣಕ್ಕೆಂದು ಜಾಗವನ್ನು ಕಾಯ್ದಿರಿಸಬೇಕೆಂದು ಹೇಳುತ್ತಿದ್ದೆ. ಆದರೂ ಒಂದು ಸಾರಿ ಇಂದಿರಾ ನಗರದಲ್ಲಿ ಬಸ್ ನಿಲ್ದಾಣಕ್ಕೆಂದು ಬಿಟ್ಟಿದ್ದ ಜಾಗವನ್ನು ಯಾರೋ ಪ್ರಭಾವಿತರು ಬಂದು ಹೇಳಿದರೆಂದು ಬಸ್ ನಿಲ್ದಾಣಕ್ಕಾಗಿ ಬಿಟ್ಟಿದ್ದ ಜಾಗವನ್ನು ಆ ಜನ ಖಾಸಗಿಯವರಿಗೆ ೮೦ × ೭೦ ಅಡಿ ಸೈಟ್‌ಗಳನ್ನಾಗಿ ಮಾಡಿ ಹಂಚಿಬಿಟ್ಟಿದ್ದರು. ಈ ತರಹ ಬೇಕಾದಷ್ಟು ಇನ್‌ಸ್ಟೆನ್ಸ್‌ಗಳನ್ನು ಕೊಡಬಹುದು. ಬಸ್ ನಿಲ್ದಾಣಕ್ಕೆ ಬಿಟ್ಟಿದ್ದ ಜಾಗವನ್ನು ಇವರು ಹೀಗೆ ಮಾಡಿರಬೇಕಾದರೆ, ಇನ್ನು ಪಾರ್ಕ್ ಮಾಡುವುದಕ್ಕೆ ಬಿಟ್ಟಿರತಕ್ಕ ಜಾಗವನ್ನು ಏನು ಮಾಡುತ್ತಾರೆಂದು ತಾವೇ ಊಹಿಸಿಕೊಳ್ಳಿ ಬಹುದು. ಈ ಸಿ. ಎ. ಸೈಟ್‌ಗಳ ಸ್ಕ್ಯಾಂಡಲ್ ಬಹಳ ಇದೆ. ಆದ್ದರಿಂದ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್‌ರವರು ತಂದಿರತಕ್ಕ ಈ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ. ಹಾಗೂ ಬೆಂಬಲ ಮಾಡುತ್ತೇನೆ. ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ. ಬೆಂಗಳೂರು ನಗರವು ಬಹಳ ವೇಗದಿಂದ ಬೆಳೆಯುತ್ತಿದೆ. ಇತ್ತೀಚೆಗೆ ವಿಶ್ವಸಂಸ್ಥೆಯವರು ಮಾಡಿರತಕ್ಕ ಸರ್ವೇ ಪ್ರಕಾರ ಭಾರತದಲ್ಲಿ ವಾಸ ಮಾಡಲಿಕ್ಕೆ ಲಾಯಕ್ ಆದ ನಗರ ಇಲ್ಲ ಅದೇನಾದರೂ ಇದ್ದರೆ ದಕ್ಷಿಣ ಭಾರತದಲ್ಲಿರತಕ್ಕ ಬೆಂಗಳೂರು ಮಾತ್ರ ಎಂದು ಹೇಳಿದ್ದಾರೆ. ಆದ್ದರಿಂದ ಬೆಂಗಳೂರಿನಲ್ಲಿ ಎಲ್ಲಾ ಕಡೆಯ ಜನರೂ ವಾಸ ಮಾಡುವುದಕ್ಕೆ ಬಯಸುತ್ತಾರೆ. ಬೇರೆ ಕಡೆಯಿಂದ ಬಂದವರೆಲ್ಲಾ ಬೆಂಗಳೂರಿನಲ್ಲಿ ಒಂದು ಸೈಟ್ ಇರಬೇಕೆಂದು ಹೇಳುತ್ತಾರೆ. ಬೇರೆ ರಾಜ್ಯದವರೂ ಸಹಾ ಇದನ್ನೇ ಹೇಳುತ್ತಾರೆ. ಬೆಂಗಳೂರು ನಗರವನ್ನು ಚೆನ್ನಾಗಿಟ್ಟುಕೊಂಡು ಪರಿಸರವನ್ನು ಕಾಪಾಡಿಕೊಂಡು ಬರಬೇಕಾದರೆ ಈ ಸಿ.ಎ. ಸೈಟ್‌ಗಳನ್ನು ಉಳಿಸಿ ಕೊಳ್ಳುವುದು ಬಹಳ ಅಗತ್ಯ. ನಮ್ಮ ಸರ್ಕಾರ ಇದ್ದಾಗ ತಪ್ಪುಗಳು ಆಗಿರಬಹುದು. ನಮ್ಮ ಸರ್ಕಾರದಲ್ಲಿ ಯಾವ ತಪ್ಪುಗಳಾಗಿಲ್ಲವೆಂದು ನಾನು ಹೇಳುವುದಿಲ್ಲ ಆದರೆ ಉದ್ದೇಶಪೂರ್ವಕವಾಗಿ ನಾವು ತಪ್ಪುಗಳನ್ನು ಮಾಡಿಲ್ಲ. ಉದ್ದೇಶ ಪೂರ್ವಕವಾಗಿ ಈ ಒಂದು ಕ್ರಾಜ್ ಇಟ್ಟಿರಲಿಲ್ಲವೆಂದು ಪ್ರೊ, ನಂಜುಂಡಸ್ವಾಮಿ ಅವರು ಹೇಳಿದ್ದಾರೆ, ನಾನು ಇದನ್ನು ಸ್ವಾಗತ ಮಾಡುತ್ತೇನೆ ಹಾಗೂ ಇದನ್ನು ಯುನಾನಿಮಸ್ ಆಗಿ ಪಾಸ್ ಮಾಡುವುದಕ್ಕೆ ನಾವೆಲ್ಲರೂ ಒಪ್ಪಿಗೆ ಕೊಡೋಣವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಸನ್ಮಾನ್ಯ ಸಭಾಧ್ಯಕ್ಷರೇ, ೧೯೯೦ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕವನ್ನು ಮಾನ್ಯ ಸದಸ್ಯರಾದ ಮಂಜುನಾಥ್ ಅವರು ಮಂಡಿಸಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತಾ ಜನತಾ ಪಕ್ಷದ ಪರವಾಗಿ ನಾನು ಇದಕ್ಕೆ ಬೆಂಬಲ ಕೊಟ್ಟು, ಇದನ್ನು ಸರ್ವಾನುಮತದಿಂದ ಎಲ್ಲರೂ ಒಪ್ಪಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿ ನಗರ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಮಂಜುನಾಥ್‌ರವರು ತಂದಿರತಕ್ಕ ಈ ಒಂದು ತಿದ್ದುಪಡಿಯು ಸಮಯೋಚಿತವಾಗಿದೆಯೆಂದು ನಾನು ಭಾವಿಸುತ್ತೇನೆ. ಇದಕ್ಕೆ ನನ್ನ ಸಂಪೂರ್ಣವಾದ ಬೆಂಬಲ ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ ಬೆಂಗಳೂರು ನಗರ ಪ್ರಾಧಿಕಾರ ಏನಿದೆ. ಅದು ಮಾನ್ಯ ಸದಸ್ಯರು ಹೇಳಿದ ಹಾಗೆ ಸಿ. ಎ. ಸೈಟುಗಳನ್ನು ಮಾಡಿ ಅವುಗಳನ್ನು ಹಂಚಿದ ಮೇಲೆ ಸರಿಯಾಗಿ ನಡೆದು ಕೊಂಡಿಲ್ಲವೆಂದು ಬಹಳ ದುಃಖದಿಂದ ಹೇಳಬೇಕಾಗಿದೆ ಹಾಗೆಯೇ ಇನ್ನೂ ಹಂಚದೇ ಇರತಕ್ಕಂಥ ಸೈಟುಗಳನ್ನು ದುರುಪಯೋಗ ಮಾಡಿಕೊಂಡು ಹೋಗುತ್ತಿರುವುದು ಬಹಳ ಇದೆ. ಇಂತಹ ಸಂದರ್ಭದಲ್ಲಿ ಈ ಪ್ರಾಧಿಕಾರವು ಖಾಸಗಿಯಾಗಿರತಕ್ಕಂಥ ಜವಿೂನುಗಳ ಬಗ್ಗೆ ಸಾಕಷ್ಟು ನಿರ್ಣಯಗಳನ್ನು ಮಾಡಿ ಅವರವರಿಗೆ ಬಿಟ್ಟುಕೊಡುವ ಹಾಗೆ ತೀರ್ಮಾನ ಮಾಡಿದ್ದಾರೆ. ಈಗಾಗಲೇ ಬಿಟ್ಟುಕೊಟ್ಟಿರತಕ್ಕ ಸೈಟುಗಳ ಪೈಕಿ ಅವು ಸದುಪಯೋಗವಾಗುವ ಬಗ್ಗೆ ಯಾವುದೇತರದ ಒಂದು ತೀರ್ಮಾನ ಆಗುತ್ತಿಲ್ಲ. ಇಂಡಸ್ಟ್ರಿಯಲ್ ಸೈಟ್‌ಗಳ ವಿಷಯದಲ್ಲೂ ಸಹ ಇದೇ ತರಹ ಆಗುತ್ತಿದೆ.

೧-೦೦ ಪಿ. ಎಂ.

ಯಾವ ದೃಷ್ಟಿಯಲ್ಲಿ ನೋಡಿದರೂ ಕೂಡಾ ಈ ಪ್ರಾಧಿಕಾರದವರು ಜವಾಬ್ದಾರಿಯಿಂದ ನಡೆದುಕೊಂಡಿಲ್ಲ. ಇವೊತ್ತು ಆ ಸೇವಿಂಗ್ ಕ್ಲಾಜ್ ಇಲ್ಲ ಅಂದರೆ ಆ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ನಿಂದ ಇಲ್ಲವೇ ಸರ್ಕಾರದಿಂದ ತಪ್ಪಾಗಿದೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಬಿ.ಡಿ.ಎ.ನಲ್ಲಿ ಜವಾಬ್ದಾರಿ

ಸ್ಥಾನದಲ್ಲಿರುವ ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನಹರಿಸಬೇಕಾಗಿದೆ. ಈ ಪ್ರಾಧಿಕಾರದ ನಡವಳಿಕೆಗಳ ವಿಷಯದಲ್ಲಿ ಮಾನ್ಯ ಸಚಿವರು ಮಹತ್ತರವಾದ ಗಮನಹರಿಸಬೇಕು. ಏಕೆಂದರೆ, ಅದು ಅಲ್ಲೋಲ-ಕಲ್ಲೋಲ ರೀತಿಯಲ್ಲಿ ನಡೆಯುತ್ತಿದೆ ಈಗ ಬೆಂಗಳೂರು ನಗರದಲ್ಲಿ ಒಂದು ಕೊಗಿಲು ಮನೆದೆ ಎಂದರೆ, ಸಾಕಷ್ಟು ಜಮೀನನ್ನು ಆಕ್ವೈರ್ ಮಾಡಲು ನೋಟಿಫೈ ಮಾಡಿದ ಮೇಲೆ ಅದನ್ನು ಆಕ್ವೈರ್ ಮಾಡುತ್ತಿಲ್ಲ. ಅದಕ್ಕೆ ಮೊದಲೇ ರೆಸಲ್ಯೂಶನ್ ಪಾಸ್ ಮಾಡಿ ಡಿನೋಟಿಫೈ ಮಾಡಿದ್ದಾರೆ. ಮತ್ತು ರೀಕನ್ವೆ ಮಾಡಿ, ಇದು ಸರಿಯಲ್ಲವೆಂದು ಕೋರ್ಟ್‌ನಲ್ಲಿ ತೀರ್ಮಾನಗಳು ಬಂದಿವೆ. ಇದನ್ನು ಸರಿಪಡಿಸಲು ಪ್ರಾಧಿಕಾರದ ಆಕ್ಟ್‌ನ್ನೇ ಬದಲಾವಣೆ ಮಾಡಬೇಕೆಂದು ಒಂದು ವರ್ಷದಿಂದ ಪ್ರಯತ್ನ ನಡೆಯುತ್ತಿದೆ. ಆದರೆ, ಅದನ್ನು ಬದಲಾವಣೆ ಮಾಡಲು ಲೀಗಲಾಗಿ ಡ್ರಾಫ್ಟ್ ಮಾಡುವುದಕ್ಕೆ ಅವರ ಕೈಯಲ್ಲಿ ಆಗುತ್ತಿಲ್ಲವೆಂದು ನನಗೆ ಗೊತ್ತಾಗಿದೆ. ಏಕೆ ಹೀಗಾಗುತ್ತದೆಂದು ಗೊತ್ತಿಲ್ಲ. ಪ್ರಾಧಿಕಾರದಲ್ಲಿ ಅಥವಾ ನ್ಯಾಯಾಂಗ ಇಲಾಖೆಯಲ್ಲಿ ಡ್ರಾಫ್ಟ್ ಮಾಡುವ ಅಧಿಕಾರಿಗಳಿಲ್ಲದೆ ಹೋದರೆ ಖಾಸಗಿ ಲಾಯರ್‌ಗಳನ್ನು ಇಟ್ಟುಕೊಂಡು ಡ್ರಾಫ್ಟ್ ಮಾಡಿಸಿ ಈ ಕಾನೂನನ್ನು ತರಬೇಕಾದ ನೆಸೆಸಿಟಿ ಇದೆ. ಈಗ ಬಹಳ ಜನ ತೊಂದರೆಯಲ್ಲಿದ್ದಾರೆ. ಅವರು ಕಣ್ಣೀರು ಹೇಗೆ ಹಾಕುತ್ತಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಈ ತಿದ್ದುಪಡಿಯನ್ನು ಸರ್ವಾನುಮತದಿಂದ ಒಪ್ಪಬಹುದು. ಅಲ್ಲದೆ, ಸಾರ್ವಜನಿಕರಲ್ಲಿ ಈ ಕೆಲವು ವಿಷಯಗಳ ಬಗ್ಗೆ ಪ್ರಾಧಿಕಾರದಿಂದ ಅಕ್ರಮಗಳಾಗಿವೆ ಎಂಬ ಕೂಗು ಇದೆಯೋ, ಅದನ್ನೆಲ್ಲಾ ಸರಿಪಡಿಸಲು ಮಾನ್ಯ ಸಚಿವರು ಬಂದು ಕಾಂಪ್ರಹೆನ್ಸೀವ್ ಲೆಜಿಸ್ಲೇಷನ್ ತರಬೇಕು. ಈಗ ಪ್ರಾಧಿಕಾರಕ್ಕೆ ಹೋದ ಜನ ಪಾಪರ್‌ಚೀಟಿಗಳಾಗುತ್ತಿದ್ದಾರೆಂದರೆ ತಪ್ಪಾಗುವುದಿಲ್ಲ. ಈಗ ರೆವಿನ್ಯೂ ಸೈಟ್ಸ್‌ನ್ನು ರೆಗ್ಯುಲರೈಜ್ ಮಾಡಬೇಕೆಂಬ ಅಭಿಪ್ರಾಯವಿದೆ. ಇದನ್ನು ಮಾಡಬೇಕಾದರೂ ಕೆಲವು ಆಕ್ಟ್‌ಗಳ ಬದಲಾವಣೆ ಮಾಡಬೇಕಾಗಿದೆ. ಹಾಗೆ ಮಾಡಬೇಕಾದರೆ ೩೦ ೪೦ ಅಡಿ ಸೈಟ್‌ಗೆ ೪೦ ಸಾವಿರದಿಂದ ೫೦ ಸಾವಿರ ಡೆವಲಪ್‌ಮೆಂಟ್ ಚಾರ್ಜ್ ಕೊಡಬೇಕಾಗಿ ಬಂದಿದೆ. ೪೦ ೬೦ ಸೈಟ್‌ಗೆ ೬೦ ಸಾವಿರದಿಂದ ೭೦ ಸಾವಿರದವರೆಗೆ ಕೊಡಬೇಕಾಗಿದೆ ವರ್ಷಗಟ್ಟಲೆ ಪ್ರಾಧಿಕಾರದವರು ಸೂಕ್ತ ನಿರ್ಣಯ ತೆಗೆದುಕೊಳ್ಳದೆ ಜನತೆಗೆ ಸೇವ್ ಮಾಡುವ ಕೆಲಸ ಮಾಡದೆ ಅವರ ಸ್ವಾರ್ಥ ಸಾಧಿಸಿಕೊಳ್ಳುವ ಕೆಲಸ ಮಾಡುತ್ತಿರುವುದರಿಂದ ಬಡ ಜನತೆಗೆ ಅನ್ಯಾಯವಾಗುತ್ತಿದೆ. ಈಗ ಸಚಿವರು ತಪ್ಪು ಮಾಡಿರುವವರನ್ನು ಶಿಕ್ಷಿಸಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಇದಕ್ಕೆ ಸರ್ವಾನುಮತದಿಂದ ಎಲ್ಲರೂ ಒಪ್ಪಿಗೆ ಕೊಡಬೇಕು ಹಾಗೂ ಮಾನ್ಯ ಸಚಿವರು ಪ್ರಾಧಿಕಾರದ ಬಗ್ಗೆ ಏನು ಕಾಂಪ್ರಹೆನ್ಸಿವ್ ಲೆಜಿಸ್ಲೇಷನ್ ತರುತ್ತೇವೆಂದು ಹೇಳಿದ್ದಾರೆ, ಅದನ್ನು ಕೂಡಲೇ ತರಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಂಗಿಸುತ್ತೇನೆ.

ಶ್ರೀ ಎಸ್. ಜಿ. ನಾಯಕ್ (ಪೊಳಕಾಲ್ಮೂರು).—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರಾದ ವಂಜುನಾಥರವರು ವಂಡಿಸಿರುವುದು ಸೂಕ್ತವಾಗಿದ್ದು ಒಳ್ಳೆಯ ವಿಷಯ ಆಗಿದೆ. ಈಗ ಏನು ನಡೆಯುತ್ತಿದೆ ಎಂದರೆ, ಹಿಂದಿನ ಕಾಲದಲ್ಲಿ ಅಂದರೆ ದೇವರಾಜ ಅರಸರ ಕಾಲದಲ್ಲಿ ಬಿಡಿಎ ಸೈಟ್‌ಗಳು ಐದಾರು ಸಾವಿರಕ್ಕೆ ಸಿಗುತ್ತಿತ್ತು. ಈಗ ೫೦ ಸಾವಿರದಿಂದ ಲಕ್ಷದವರೆಗೆ ಹೋಗಿದೆ. ಏತಕ್ಕೋಸ್ಕರ ಹೀಗಾಗುತ್ತಿದೆ ಅಂದರೆ ಈ ಪ್ರಾಧಿಕಾರದಲ್ಲಿರುವ ಆಫೀಸರ್‌ಗಳು ಹೆಗ್ಗಣಗಳು ಇದ್ದಂತೆ ಇದ್ದಾರೆ. ಇದನ್ನು ಸರಿಪಡಿಸಲು ಶ್ರೀ ವಂಜುನಾಥರವರು ವಂಡಿಸಿರುವ ತಿದ್ದುಪಡಿ ಸೂಕ್ತವಾದ್ದಾಗಿದೆ. ಇದನ್ನು ಸರ್ವಾನುಮತದಿಂದ ಎಲ್ಲರೂ ಅನುಮೋದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ವಿದ್ಯಾ ವಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ವಂಜುನಾಥರವರು ಈ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಸಂಬಂಧಪಟ್ಟ ಈ ಮಸೂದೆಯ ಬಗ್ಗೆ ಏನು ತಿದ್ದುಪಡಿಯನ್ನು ತಂದಿದ್ದಾರೆ, ಈ ತಿದ್ದುಪಡಿ ವಿಚಾರದಲ್ಲಿ ಸರ್ಕಾರ ಈಗಾಗಲೇ ಗಮನವನ್ನು ಹರಿಸಿದೆ ಇದಕ್ಕೆ ಸೇವಿಂಗ್ ಕ್ಲಾಸ್ ಅನ್ನು ತರಬೇಕೆಂಬುದು ಅವರ ಉದ್ದೇಶ. ಆದರೆ ತಮಗೆ ಗೊತ್ತಿರುವಂತೆ BDA is one Authority which has been more abused ಆದುದರಿಂದ ಇದನ್ನು ಸ್ವಲ್ಪ ಜಾಗ್ರತೆಯಾಗಿ ಸರ್ಕಾರ ನೋಡಬೇಕಾಗಿದೆ. ಏಕೆಂದರೆ ಸೇವಿಂಗ್ಸ್ ಕ್ಲಾಸ್‌ನಲ್ಲಿ ಎಲ್ಲಾ ಇರೆಗ್ಯುಲರ್, ಇಲ್ಲೀಗಲ್ ಅಲಾಟ್‌ಮೆಂಟ್ ಆಫ್ ದಿ ಕಾರ್ನರ್ ಸೈಟ್ಸ್, ರೆಗ್ಯುಲರೈಜ್ ಮಾಡಲಿಕ್ಕೆ ಹೋದರೆ ಬಹುಶಃ ಅದು ಉದ್ದೇಶ ಕೂಡಾ ಅಲ್ಲ ಎಂದು ನನಗನ್ನಿಸಂತ್ತದೆ. ಏನು ಸದುದ್ದೇಶದಿಂದ ಕೆಲವರು ನಿಜವಾದಂಥ ಅಭಿವೃದ್ಧಿಯನ್ನು ಮಾಡಿದ್ದಾರೆ, that can definitely be considered. ಆದುದರಿಂದ ಈ ದಿಶೆಯಲ್ಲಿ ತಾವು ಈ ಮಸೂದೆಯನ್ನು ಸದುದ್ದೇಶದಿಂದ ತಂದಿದ್ದೀರಿ. ಈ ವಿಚಾರದಲ್ಲಿ ಸರ್ಕಾರ ಈಗಾಗಲೇ ಆಲೋಚನೆ ಮಾಡುತ್ತಿದೆ. ಇದಕ್ಕೆ ಒಂದು ತಿದ್ದುಪಡಿಯಂತೂ ತರಲೇಬೇಕು. ತಿದ್ದುಪಡಿಯನ್ನು ಯಾವ ರೀತಿಯಲ್ಲಿ ತರಬೇಕು ಅಂದರೆ ಅಧಿಕಾರ ದುರುಪಯೋಗವಾಗದ ರೀತಿಯಲ್ಲಿ ಮತ್ತು ಕಾರ್ನರ್

ಸೈಟ್‌ಗಳನ್ನು ಮಾರಸ್ವೇಚ್ಛೆಯಾಗಿ ಹಂಚತಕ್ಕಂಥದ್ದನ್ನು ಕೂಡಾ ನಿಲ್ಲಿಸಬೇಕಾಗಿದೆ. ಈ ಸೇವಿಂಗ್ ಕ್ಲಾಸ್‌ನಲ್ಲಿ ಎಲ್ಲಾ ಮರಸ್ವೇಚ್ಛೆಯಾಗಿ ಹಂಚತಕ್ಕಂಥ ವ್ಯವಸ್ಥೆಗೆ ಅಧಿಕಾರವನ್ನು ಕೊಟ್ಟುಬಿಟ್ಟರೆ.....

ಶ್ರೀ ಎಂ. ಪಿ. ಪೆಂಕಟೇಶ್.—ಕಾರ್ನರ್ ಸೈಟುಗಳನ್ನು ಸ್ವಲ್ಪ ಜಾಗ ಬಿಟ್ಟು, ಮತ್ತೆ ಪಂಚಾಶ್ರಿದ್ದಾರೆ; ಅಂಥದ್ದನ್ನು ಸಹ ತಪ್ಪಿಸಬೇಕು. ಉದಾಹರಣೆಗೆ ೫೦ ಅಡಿ ಜಾಗ ಇದ್ದರೆ ಹತ್ತು ಅಡಿ ಕಾರ್ನರ್ ಸೈಟ್ ಎಂದು ಜಾಗ ಬಿಟ್ಟು ೪೦ ಅಡಿಯನ್ನು ಹಂಚುತ್ತಿದ್ದಾರೆ. ಇದನ್ನೂ ಕೂಡಾ ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದುದರಿಂದ ಬಹಳ ಸ್ವೇಚ್ಛವಾದಂಥ ಅಧಿಕಾರವನ್ನು ಕೊಡತಕ್ಕಂಥ ಉದ್ದೇಶ ಸರ್ಕಾರದ್ದು ಇಲ್ಲ. ಆದರೆ, ಕಾರ್ನರ್ ಸೈಟುಗಳನ್ನು ಯಾವ ರೀತಿ ಹಂಚಬೇಕು ಅಥವಾ ಅದನ್ನು ಯಾವ ರೀತಿಯಾಗಿ ಯಾವ ಉದ್ದೇಶಕ್ಕಾಗಿ ಕಾರ್ನರ್ ಸೈಟುಗಳನ್ನು ಉಳಿಸಿಕೊಂಡಿದ್ದಾರೆ. ಅದು ಬರೀ ಬಿ.ಡಿ.ಎ. ತನ್ನ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವುದಕ್ಕೆಂದು ಅಲ್ಲ. ಆ ದೃಷ್ಟಿಯಿಂದ ಅದನ್ನು ಸ್ವೇಚ್ಛೆಯಾಗಿ ಹಂಚತಕ್ಕಂಥಾದ್ದೂ ಅಲ್ಲ. ಆದುದರಿಂದ ಇದರ ಬಗ್ಗೆ ಸಂಪೂರ್ಣವಾದಂಥ ಒಂದು ಕರಿಯಾದಂಥ ವ್ಯವಸ್ಥೆಯನ್ನು ಮಾಡಬೇಕು ಎಂಬ ಉದ್ದೇಶದಿಂದ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡುತ್ತಿದೆ.

ಶ್ರೀ ಸಿ. ಬೈರೇಗೌಡ.—ತಾವು ಹೇಳತಕ್ಕಂಥಾದ್ದು ಇಂಥ ಕಾನೂನಿನ ಅವಶ್ಯಕತೆ ಇದೆ ಎಂದು. ಇದಕ್ಕೆ ನಮ್ಮ ಸಮ್ಮತಿಯೂ ಇದೆ. ಆದಕಾರಣ ಇದಕ್ಕೇನಾದರೂ ಒಂದು ಅಫಿಸಿಯಲ್ ಅಮೆಂಡ್‌ಮೆಂಟನ್ನು ತಾವೇ ತಂದರೆ ಅದನ್ನು ನಾವು ಒಪ್ಪಬಹುದಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ —ಇದರ ಬಗ್ಗೆ ಏನೆಲ್ಲಾ ನಡೆದಿದೆ ಎಂಬುದು ತಮಗೆ ಗೊತ್ತಿದೆ. ಆದುದರಿಂದ ನಾವು ಇವತ್ತು ಈ ಸೇವಿಂಗ್ಸ್ ಕ್ಲಾಸನ್ನು ಪುನಃ ಸಾರ್ವಜನಿಕರ ಟೀಕೆಗೆ ಒಳಗಾಗತಕ್ಕಂಥ ಒಂದು ಜವಾಬ್ದಾರಿಯನ್ನು ನಮ್ಮ ಸರ್ಕಾರ ಪಹಿಸಿಕೊಳ್ಳುವುದಕ್ಕಾಗುವುದಿಲ್ಲ. ಈ ಕಾರ್ನರ್ ಸೈಟ್ ಬಗ್ಗೆ ಈಗ ಯಾವ ತರಹ ಹಂಚಿಕೆಯಾಗಿದೆ ಎಂಬುದು ಸಾರ್ವಜನಿಕರ ಗಮನವನ್ನೂ ಸಹ ಸೆಳೆದಿದೆ, ಹಾಗೂ ಸಾಕಷ್ಟು ಸಾರ್ವಜನಿಕರ ಟೀಕೆಗೂ ಕೂಡಾ ಒಳಗಾಗಿದೆ. ಆದುದರಿಂದ ಇಂಥ ಟೀಕೆಗೆ ಒಳಗಾಗತಕ್ಕಂಥ ಜವಾಬ್ದಾರಿಯನ್ನು ನಮ್ಮ ಸರ್ಕಾರ ಪಹಿಸಿಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಸ್ವಲ್ಪ ಕಡಿವಾಣವನ್ನು ಹಾಕಿ ಪ್ರಸ್ತುತವಾದ ರೀತಿಯಲ್ಲಿ ಈ ಕಾರ್ನರ್ ಸೈಟುಗಳನ್ನು ಹಂಚಬೇಕಾಗುತ್ತದೆ. ಒಂದು ಸಾರ್ವಜನಿಕ ಹಿತಾಶಕ್ತಿ ಇದರಲ್ಲಿ ಅಡಕವಾಗಿರಬೇಕಾಗುತ್ತದೆ, ಬರೀ ವೈಯಕ್ತಿಕವಾದಂಥ ಕೆಲವು ಪಟ್ಟಭದ್ರ ಹಿತಾಶಕ್ತಿ ಮಾತ್ರ ನಾವು ಗಮನಕ್ಕೆ ತಂದುಕೊಂಡರೆ ಸಾಲದು. ಹೆಚ್ಚಾಗಿ ಸಾರ್ವಜನಿಕ ಹಿತಾಶಕ್ತಿಗೆ ಪ್ರಾಮುಖ್ಯತೆ ಕೊಡಬೇಕಾಗಿದೆ. ಈ ದೃಷ್ಟಿಯನ್ನು ಇಟ್ಟುಕೊಂಡು ನಾವು ತಿದ್ದುಪಡಿಯನ್ನು ಇದಕ್ಕೆ ಸಂಬಂಧಪಟ್ಟಂತೆ ತರಬೇಕು ಎಂದು ಸರ್ಕಾರದ ಉದ್ದೇಶವಿರುವುದರಿಂದ ತಾವು ದಯಮಾಡಿ ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಸವಿನಯದಿಂದ ಅಧ್ಯಕ್ಷರ ಮುಖೇನ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಇದರ ಬಗ್ಗೆ ಆದಷ್ಟು ಜಾಗ್ರತೆ ಈ ತಿದ್ದುಪಡಿಯನ್ನು ತರುತ್ತೇವೆ.

ಶ್ರೀ ಸಿ. ಬೈರೇಗೌಡ.—ಯಾವ ತಾರೀಖಿನ ಒಳಗಾಗಿ ಸಮಗ್ರವಾದಂಥ ಈ ಮಸೂದೆಯನ್ನು ತರುತ್ತೀರೆಂದು ಒಂದು ಆಶ್ವಾಸನೆಯನ್ನು ತಾವು ಕೊಡಬೇಕು. ಈಗ ಇರತಕ್ಕಂಥ ಕಾನೂನಿನಲ್ಲಿ ಲೋಪದೋಷಗಳು ಇವೆ, ಅದು ಸರಿಯಾಗಿಲ್ಲ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆ, ಆದುದರಿಂದ ಅದನ್ನು ಸರಿಪಡಿಸಬೇಕಾಗಿರತಕ್ಕಂಥದ್ದು ಸರ್ಕಾರದ ಆದ್ಯ ಕರ್ತವ್ಯ. ಈ ಕರ್ತವ್ಯವನ್ನು ಎಷ್ಟು ಶೀಘ್ರವಾಗಿ ಅಥವಾ ಎಷ್ಟು ತಾರೀಖಿನ ಒಳಗಾಗಿ ಅಥವಾ ಎಷ್ಟು ತಿಂಗಳಲ್ಲಿ, ಅಥವಾ ಈ ಅಧಿವೇಶನದಲ್ಲಿಯೇ ತರುತ್ತೀರಾ? ಅಥವಾ ಬರತಕ್ಕಂಥ ಅಧಿವೇಶನದಲ್ಲಿಯೇ ತರುತ್ತೀರಾ ಎನ್ನತಕ್ಕಂಥ ಒಂದು ಪಾಸಿಟೀವ್ ಅಸ್ಯೂರೆನ್ಸ್ ತಮ್ಮಿಂದ ಬಂದರೆ ಅದು ರಾಜ್ಯಕ್ಕೂ ಒಳ್ಳೆಯದಾಗುತ್ತದೆ ಮತ್ತು ನಿಮಗೂ ಕೂಡಾ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಈಗ ತಮಗೆ ಗೊತ್ತಿದೆ. Justice hurried is also justice burried. ಆದ್ದರಿಂದ ನಾವು ಬೇಗನೆ ನ್ಯಾಯ ಒದಗಿಸಬೇಕೆಂದು ಹೊರಟರೆ ಅದು ಸಾರ್ವಜನಿಕ ಹಿತಾಶಕ್ತಿಗೆ ಅನಾನುಕೂಲವಾದರೆ ಅದೂ ಸಹ ತೊಂದರೆಯಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಇದಕ್ಕೆ ತಿದ್ದುಪಡಿಯನ್ನು ತರುತ್ತೇವೆ.

ಶ್ರೀ ಎಂ. ಪಿ. ಪೆಂಕಟೇಶ್. — ಆದಷ್ಟು ಬೇಗ, ಪ್ರಯತ್ನ ಕೂಡಲೇ ಪರಿಶೀಲನೆ ಇದೆಲ್ಲಾ ಆಗಲೇ ಆಗುತ್ತದೆ. ದಯವಿಟ್ಟು ಒಂದು ಟೈಮ್ ಹೇಳಿ. ತಾವು ಆದಷ್ಟು ಬೇಗ ಅಂದರೆ ಇದರ

ವರ್ಷ ಆಗಬಹುದು, ಒಂದು ನಿಗದಿಯಾದ ತಾರೀಖು ಹೇಳಿ. ಒಂದು ತಿಂಗಳೋ ಎರಡು ತಿಂಗಳೋ ಮೂರು ತಿಂಗಳೋ ಹೇಳಿ. ಆದಷ್ಟು ಎನ್ನುವುದು ಸ್ವಲ್ಪ ಕಷ್ಟ, ಒಂದು ತಿಂಗಳು ಎಂದರೆ ಹೇಳಿ...

ಶ್ರೀ ಎ. ಕೆ. ಅನಂತಕೃಷ್ಣ.— ಮಾನ್ಯ ಸಭಾಧ್ಯಕ್ಷರೇ, ಈ ಹಿಂದೆ ಸುಮಾರು ಒಂದು ವರ್ಷದಲ್ಲಿ ತಿದ್ದುಪಡಿ ತರುತ್ತೇವೆ ಎಂದು ಹೇಳಿದ ಮೇಲೆ ಆ ತಿದ್ದುಪಡಿ ಮಾಡುವುದಕ್ಕೆ ಪ್ರಾರಂಭ ಕೂಡ ಆಗಿದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆ ಕೂಡ ಇದೆ. ಸರ್ಕಾರ ಚಿಂತನೆ ಮಾಡುತ್ತದೆ ಎಂದರೆ ಜನಗಳ ಚಿಂತನೆಯನ್ನು ಕೇಳುವವರು ಯಾರು ಎಂದರು? ಈ ಚಿಂತನೆಗೂ ಜನಗಳ ಚಿಂತನೆಗೂ ಏನಾದರೂ ಹೊಂದಾಣಿಕೆ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ನನಗೆ ತಿಳಿದ ಹಾಗೆ ಸಾವಿರಾರು ಜನ ಕಣ್ಣೀರು ಹಿಡುತ್ತಿದ್ದಾರೆ, ಬಹಳ ಕಷ್ಟದಲ್ಲಿದ್ದಾರೆ. ಒಂದು ಸಮಗ್ರವಾದ ತಿದ್ದುಪಡಿಯನ್ನು ತಾವು ಬಿಡಿಎ ಆಕ್ಟ್‌ಗೆ ತರಬೇಕಾಗಿದೆ. ಸೆಕ್ರೆಟರಿಯೇಟ್ ಲೆವೆಲ್‌ನಲ್ಲಿ ಇದಕ್ಕೆ ತೀವ್ರ ಗಮನ ಕೊಡುತ್ತಿಲ್ಲ. ಅಲ್ಲಿ ಪ್ರಾಧಿಕಾರದಲ್ಲಿರುವವರು ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಅನೇಕ ಜನರು ನಮ್ಮಿಂಥವರನ್ನು ಕೇಳಲು ಬರುತ್ತಾರೆ. ಈ ಪರಿಸ್ಥಿತಿ ಇದೆ. ಕೆಲವು ಜನ ತೋದರೆಯಲ್ಲಿ ಸಿಕ್ಕಿಕೊಂಡು ಸತ್ತು ಹೋಗುತ್ತಾ ಇದ್ದಾರೆ. ತಿದ್ದುಪಡಿ ತರುವುದು ಯಾವಾಗ? ಯಾವ ಕಾಲಕ್ಕೆ ತರುವುದು. ಯಾವ ಕಾಲಕ್ಕೆ ಜನರಿಗೆ ಒಳ್ಳೆಯದು ಮಾಡುವುದು? ಸಾರ್ವಜನಿಕರ ಹಿತ ಚಿಂತನೆಗಾಗಿ ಮಾಡುವುದು ಎಂದರೆ ಎಲ್ಲಿ. ಯಾವಾಗ ಎಂದು ನಾವು ಬೆಂಗಳೂರು ನಗರದ ಜನರಿಗೆ ಜವಾಬು ಕೊಡಬೇಕಾಗುತ್ತದೆ, ಇದು ಬಹಳ ಕಷ್ಟ ಆಗುತ್ತದೆ.

ಶ್ರೀ ಎಂ. ಪಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ ಇದಕ್ಕೆ ತಿದ್ದುಪಡಿ ತರುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇದರಲ್ಲಿ ಅನೇಕ ಲೋಪದೋಷಗಳಿವೆ. ಅದರಲ್ಲಿ ಅತೀ ಮುಖ್ಯವಾಗಿರುವುದು ಎಂದರೆ ಬಿಡಿಎನಲ್ಲಿ ಸೈಟ್ ಅಲಾಟ್ ಆದ ಎರಡು ವರ್ಷದಲ್ಲಿ ಮನೆಯನ್ನು ಕಟ್ಟಬೇಕು ಇಲ್ಲದಿದ್ದರೆ ಸರ್ಕಾರ ಸೈಟನ್ನು ವಾಪಸ್ ತೆಗೆದುಕೊಳ್ಳುತ್ತೇವೆಂಬ ಷರತ್ತನ್ನು ಹಾಕಿದ್ದಾರೆ. ಎರಡು ವರ್ಷದಲ್ಲಿ ಮನೆಯನ್ನು ಕಟ್ಟದಿದ್ದರೆ ಎರಡನೆ ವರ್ಷ ಆದ ತಕ್ಷಣ ಎಲ್ಲರಿಗೂ ನೋಟೀಸ್ ಕೊಡುತ್ತಾರೆ ನಿಮ್ಮ ಸೈಟನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎನ್ನುವ ರೀತಿಯಲ್ಲಿ ನನಗೆ ತಿಳಿದಿರುವ ಹಾಗೆ ಸುಮಾರು ೫೦-೪೦ ಸಾವಿರ ಜನಕ್ಕೆ ನೋಟೀಸ್ ಕೊಡುವುದು ಆಗಿದೆ. ಅವರು ಬಂದು ಅಧಿಕಾರಿಗಳನ್ನು ಕಂಡು ಹಣ ಕೊಟ್ಟು ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಎಂದು ಮುಂದಕ್ಕೆ ಹಾಕಿಸಿಕೊಂಡು ಹೋಗುತ್ತಿದ್ದಾರೆ. ಒಂದು ಕಡೆ ಸಿಮೆಂಟ್ ಸಿಗುವುದಿಲ್ಲ, ಇನ್ನೊಂದು ಕಡೆ ಬೆಲೆ ಜಾಸ್ತಿ ಅಥವಾ ಮನೆ ಕಟ್ಟುವುದಕ್ಕೆ ಲೋನ್ ಸಿಗುವುದಿಲ್ಲ. ಈ ರೀತಿಯ ಕಷ್ಟಗಳು ಬಂದು ಸೈಟ್ ಅಲಾಟೀಸ್ ಯಾರು ಇದ್ದಾರೆ ಅವರಿಗೆ ಬಹಳ ತೊಂದರೆ ಇದೆ. ಅದಕ್ಕೋಸ್ಕರ ನೀವು ತಿದ್ದುಪಡಿ ತರುವಾಗ ಅಗ್ರಿಮೆಂಟ್‌ನಲ್ಲಿ ಎರಡು ವರ್ಷದಲ್ಲಿ ಮನೆ ಕಟ್ಟಬೇಕು ಎಂದು ಏನಿದೆ, ಅದನ್ನು ತೆಗೆದು ಅದರ ಬದಲು ನಾಲ್ಕು ವರ್ಷ ಅಥವಾ ಐದು ವರ್ಷ ಎಂದರೆ ತಿದ್ದುಪಡಿ ತಂದರೆ ಸುಮಾರು ೫೦ ೪೦ ಸಾವಿರ ಸೈಟ್ ಹೋಲ್ಡರ್ಸ್‌ಗೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನೂ ಸಹ ತಾವು ಆಲೋಚನೆ ಮಾಡಿ.

ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ).— ಮಾನ್ಯ ಅಧ್ಯಕ್ಷರೇ, ಶ್ರೀಯುತ ಮಂಜುನಾಥ್ ರವರು ತಂದಿರತಕ್ಕ ತಿದ್ದುಪಡಿಯು ಈ ಸಿಎ ಸೈಟ್‌ಗಳ ಬಗ್ಗೆ, ಸೂಕ್ತವಾಗಿದ್ದರೂ ಕೂಡ ಈ ಸಿಎ ಸೈಟ್‌ಗಳ ಹಂಚಿಕೆಯ ಬಗ್ಗೆ ಕೆಲವು ಅನುಮಾನಗಳು ಬಂದಿರುವುದು ನಮಗೆಲ್ಲರಿಗೂ ಗೊತ್ತಿರತಕ್ಕ ವಿಷಯ ಈ ಸಿಎ ಸೈಟ್‌ಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ಕೂಲ್‌ಗಳಿಗೆ ಚರ್ಚ್‌ಗಳಿಗೆ ಮಸೀದಿಗಳಿಗೆ, ದೇವಸ್ಥಾನಗಳಿಗೆ ಅಲ್ಲದೆ ಖಾಸಗೀ ಸಂಘ ಸಂಸ್ಥೆಗಳಿಗೂ ಕೊಡುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿದೆ ಆದರೆ ಬೆಂಗಳೂರು ನಗರ ವಿಪರೀತವಾಗಿ ಬೆಳೆಯುತ್ತಾ ಇರುವುದು ನಮ್ಮೆಲ್ಲರಿಗೂ ಗೊತ್ತಿದೆ. ಸ್ಮಶಾನಗಳಿಗೆ ಯಾವ ಲೇ-ಔಟ್‌ನಲ್ಲಿಯೂ ಜಾಗವನ್ನು ಮೀಸಲಾತಿ ಮಾಡದೇ ಇರುವುದು ಬಹಳ ದುಃಖದ ವಿಷಯ ಆಗಿರುತ್ತದೆ. ಅದೂ ಅಲ್ಲದೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಆಕ್ಟಿಸಿಷನ್ ಪ್ರೊಸೀಡಿಂಗ್ಸ್ ಏನು ಮಾಡುತ್ತಾರೆ. ಅದಕ್ಕೆ ಒಂದು ವರ್ಷ ಆದರೂ ಸರಿಯೇ, ಎರಡು ವರ್ಷ ಆದರೂ ಸರಿಯೇ ಪ್ರಿಲಿಮಿನರಿ ನೋಟಿಫಿಕೇಷನ್ ಆದರೆ ಐದು ವರ್ಷ ಆಗಬೇಕು, ಇಂಟರಿಮ್ ನೋಟಿಫಿಕೇಶನ್ ಆದರೆ ೧೦ ವರ್ಷ ಆಗಬೇಕು. ಫೈನಲ್ ನೋಟಿಫಿಕೇಶನ್ ಆಗಬೇಕಾದರೆ ೧೫ ವರ್ಷ ಆಗಬೇಕು. ಮಾನ್ಯ ಅನಂತಕೃಷ್ಣರವರು ಹೇಳುವ ಹಾಗೆ ಬೆಂಗಳೂರು ಜನರ ಕಷ್ಟಕ್ಕೆ ನಾವು ಭಾಗಿ ಆಗಲಿಲ್ಲ ಎಂದರೆ ಇದೂ, ಬಹಳ ದುಃಖಿಕರವಾದ ವಿಷಯ ಆಗುತ್ತದೆ ಆದ್ದರಿಂದ ಬಿಡಿಎ ಮಾತ್ರ ಸರ್ಕಾರ ಸೇರಿಕೊಂಡು ಒಂದು ಜಮೀನನ್ನು ಅಕ್ವೈರ್ ಮಾಡಬೇಕಾದರೆ ಇಷ್ಟೇ ವರ್ಷದಲ್ಲಿ ಅಕ್ವೈರ್ ಮಾಡಿ ನಾವು ಜನತೆಗೆ ಸಹಾಯ ಮಾಡಿದರೆ ಮಾತ್ರ ಒಳ್ಳೆಯ ಕೆಲಸ ಮಾಡಿದಂತೆ ಆಗುತ್ತದೆ. ಇಲ್ಲದಿದ್ದರೆ ಜನ ಕಣ್ಣೀರು ಬಿಡುತ್ತಾರೆ. ಬಹಳಷ್ಟು ಜನ

ಇವೊತ್ತು ಶಾಪ ಹಾಕುತ್ತಿದ್ದಾರೆ. ಬಿಡಿಎ ಅಂದರೆ ಎಷ್ಟೋ ಕಡೆ ಸೈಟ್‌ಗಳನ್ನು ಕೊಟ್ಟು ಮೂರು ವರ್ಷ, ಐದು ವರ್ಷ ಆಗಿದೆ ಇವೊತ್ತು ಹಕ್ಕು ಪತ್ರಗಳನ್ನು ಕೊಡದೇ ಇರತಕ್ಕ ಪ್ರಸಂಗಗಳನ್ನೂ ನಾವು ನೋಡಿದ್ದೇವೆ. ಆದ್ದರಿಂದ ಇವೊತ್ತು ಮಾನ್ಯ ಮಂಜುನಾಥ್‌ರವರು ಮಂಡಿಸಿರತಕ್ಕ ಈ ಶಿದ್ದು ಪಡಿ ಏನು ಇದೆ, ಒಂದುರೀತಿಯಲ್ಲಿ ಸೂಕ್ತವಾಗಿದ್ದರೂ ಸಹ, ಅದೇಕಾಲಕ್ಕೆ ಮಾನ್ಯ ಮೊಯಿಲಿಯವರು ಸರ್ಕಾರದ ವತಿಯಿಂದ ತಿದ್ದುಪಡಿ ತರುತ್ತಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಆದಷ್ಟು ಬೇಗ ತಂದು ಬೆಂಗಳೂರು ಜನರಿಗೆ ಒಳ್ಳೆಯದು ಮಾಡಬೇಕು, ಎಂದು ನನ್ನ ಸಲಹೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಮಂಜುನಾಥ್‌ರವರು ತಂದಿರತಕ್ಕಈ ತಿದ್ದುಪಡಿ ಮಸೂದೆಯ ಬಗ್ಗೆ ಹೇಳ ಬೇಕೆಂದರೆ ಈ ಬಿ. ಡಿ. ಎ. ಬಗ್ಗೆ ಒಂದು ಸಮಗ್ರವಾದಂತಹ ಚರ್ಚೆಗೆ ಇಲ್ಲಿ ನಡೆಯಬೇಕಾಗುತ್ತದೆಂದು ನನ್ನಗನ್ನಿಸುತ್ತದೆ. ತಾವು ಯಾವ ರೂಪದಲ್ಲಾದರೂ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರ ಜೊತೆಗೆ ಜಿ. ವಿ. ಕೆ. ರಾವ್ ವರದಿಯ ಪ್ರಕಾರ ಈ ಗೃಹ ನಿರ್ಮಾಣ ಸಹಕಾರ ಸಂಘಗಳದ್ದು ಒಂದು ದೊಡ್ಡ ಕರ್ಮಕಾಂಡವೇ ಆಗಿದೆ. ಇವೆರಡರ ಬಗ್ಗೆ ಇಲ್ಲಿ ಸಮಗ್ರವಾದ ಚರ್ಚೆಯಾಗಬೇಕು, ಆಗ ನೂರಾರು ಕೋಟಿ ರೂಪಾಯಿಯವರೆಗೆ ಭ್ರಷ್ಟಾಚಾರವಾಗಿರುವುದು, ಮೋಸ ನಡೆದಿರುವುದು ಹೊರಗಡೆ ಬರುತ್ತದೆ. ಮೂಲೆ ನಿವೇಶನಗಳ ಹರಾಜನ್ನು ಸಾರೋದ್ದಾರವಾಗಿ ಮಾಡುತ್ತಿದ್ದಾರೆ. ಈ ಮೂಲೆ ನಿವೇಶನಗಳು ಇಂದಂ ಚಿನ್ನದ ಗಣಿಯಾಗಿವೆ. ಕೆ.ಜಿ.ಎಫ್.ನಲ್ಲಿ ಚಿನ್ನ ಮುಗಿದಂ ಹೋಗಿದ್ದರೂ ಸಹ ಬೆಂಗಳೂರಿನ ಎಂಂಲೆ ನಿವೇಶನಗಳಂ ಚಿನ್ನದ ಗಣಿಯಾಗಿವೆ. ಇದನ್ನು ಹರಾಜಿನಲ್ಲಿ ತೆಗೆದುಕೊಳ್ಳುವವರು ಯಾರೆಂದರೆ ಬಾಂಬೆಯಿಂದ ಬಂದಿರತಕ್ಕವರು, ಕೇರಳದಿಂದ ಬಂದಿರತಕ್ಕವರಂ. ದೆಹಲಿಯಿಂದ ಬಂದಿರತಕ್ಕ ದೊಡ್ಡ ದೊಡ್ಡ ಹಣವಂತರು. ಈ ಎಲ್ಲವನ್ನು ಅವರಂ ಪಡೆದಂ ಆಕಾಶಕ್ಕೆ ಹೋಗ ತಕ್ಕ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಕರ್ನಾಟಕದವರೇ ಈ ನಿವೇಶನಗಳನ್ನು ಹರಾಜಿನಲ್ಲಿ ಪಡೆಯಬಹುದು ಎನ್ನತಕ್ಕ ಒಂದು ಹೊಸ ತಿದ್ದುಪಡಿಯನ್ನು ತರುವುದಾದರೆ ನಮ್ಮ ಸಂಪತ್ತು ನಮಗೇ ಉಳಿಯುತ್ತದೆ. ಮತ್ತು ನಮ್ಮ ಜನಗಳಿಗೂ ಸಹ ಅನುಕೂಲವಾಗುತ್ತದೆ. ಪ್ರಾಧಿಕಾರದಲ್ಲಿ ಇದುವರೆಗೂ ಹಂಚಿರುವ ನಿವೇಶನದಲ್ಲಿ ೧೦೦ಕ್ಕೆ ೮೦ ಭಾಗ ಎಲ್ಲವನ್ನೂ ಹೊರಗಡೆಯವರಿಗೆ ಕೊಟ್ಟಿದ್ದಾರೆ ಇವೆಲ್ಲದರ ಬಗ್ಗೆ ಮಾಹಿತಿ ತರಿಸಿ, ಸದನದ ಮುಂದೆ ಇಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈ ಮೂಲೆ ನಿವೇಶನದ ಬಗ್ಗೆ ಪ್ರಮಾಣಿಕ ಪ್ರಯತ್ನ ಮಾಡಿ, ಇದುವರೆಗೆ ಹರಾಜಿನಲ್ಲಿ ಯಾರ್ಯಾರು ಕೊಂಡುಂ ಕೊಂಡಿದ್ದಾರೆಂಬ ಬಗ್ಗೆ ಪಟ್ಟಿ ತರಿಸಿದರೆ ತಮಗೆ ಗೊತ್ತಾಗುತ್ತದೆ, ಇವತ್ತು ಮೂಲೆ ನಿವೇಶನ ಹರಾಜನ್ನು ನಿಲ್ಲಿಸಿ ಬಿಡಿ, ಇದನ್ನು ಸಾರ್ವಜನಿಕವಾದಂಥ ಕೆಲಸ ಕಾರ್ಯಗಳಿಗೆ ಸರ್ಕಾರಿ ಕಟ್ಟಡಗಳಿಗೆ ಉಪಯೋಗಿಸಿಕೊಳ್ಳಿ, ಆದರೆ ಹರಾಜು ಮಾಡುವುದಕ್ಕೆ ಮಾತ್ರ ಹೋಗಬೇಡಿ, ಹರಾಜಿನಲ್ಲಿ ಕೊಡುವುದರಿಂದ ನಮ್ಮ ಸಂಪತ್ತು ಬೇರೆಯವರಿಗೆ ಹೋಗುತ್ತದೆ. ಅವರಿಗೆ ಕೊಟ್ಟರೆ, ಅವರು ಕೋಟಿ ಕೋಟಿ ರೂಪಾಯಿಯನ್ನು ಸಂಪಾದನೆ ಮಾಡಲು ನಾವೇ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ತಿಳಿಸುತ್ತಿದ್ದೇನೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ತರುವುದಕ್ಕೆ ಪೂರ್ವಭಾವಿಯಾಗಿ ನಾನು ಇದರ ಬಗ್ಗೆ ಸರ್ಕಾರ ತಕ್ಷಣವೇ ತಿದ್ದುಪಡಿ ತಂದರೆ ಬಹಳ ಸಂತೋಷವಾಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಹೇಳಿದೆ. ಆಗ ಮಾನ್ಯ ಮಂತ್ರಿಗಳು ಇರಲಿಲ್ಲ. ಈಗ ವ್ಯಾಪಕವಾಗಿ ಚರ್ಚೆ ಮಾಡಿದಾಗ ತಮಗೆ ಅನ್ನಿಸಿರಬಹುದು, ಸರ್ವ ಸದಸ್ಯರಿಗೂ ಸಹ ಈ ಬಗ್ಗೆ ಕಳಕಳಿ ಇದೆ.

ಸಾರ್ವಜನಿಕ ಉಪಯೋಗಕ್ಕೋಸ್ಕರ, ಆಸ್ಪತ್ರೆ, ದೇವಸ್ಥಾನ, ಮಂಸೀದಿ, ಚರ್ಚು, ಕಲ್ಯಾಣ ಮಂದಿರ, ಸಮುದಾಯಭವನ, ಇದಕ್ಕೋಸ್ಕರ ಏನು ೧೯೮೪ನೇ ಇಸವಿಯಿಂದ ಸಂಮಾರು ೫೩ ಸಂಸ್ಥೆಗಳಿಗೆ ಈ ಜಾಗಗಳನ್ನು ಏನು ಕೊಟ್ಟಿದ್ದಾರೆ. ಆ ನಿವೇಶನಗಳಿಗೆ ಈಗಾಗಲೇ ಕಂದಾಯವನ್ನು ತೆಗೆದುಕೊಂಡಿದ್ದಾರೆ. ಪ್ಲಾನ್ ಅಪ್ರೂವ್ ಮಾಡಿದ್ದಾರೆ ಮತ್ತು ಲೈಸೆನ್ಸ್ ಕೊಟ್ಟಿದ್ದಾರೆ. ಇವೆಲ್ಲ ಆಗಿ ಈಗ ಕಟ್ಟಡಗಳು ಸಹ ಬಂದಿವೆ. ಆ ಒಂದು ದೃಷ್ಟಿಯಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಏನಃ ಇನ್ನಾವುದೇ ವಿಚಾರದಲ್ಲಿ ಅಲ್ಲ. ಆದ್ದರಿಂದ ಸರ್ಕಾರ ಕೂಡಲೇ ಇದರ ಬಗ್ಗೆ ಗಮನ ಹರಿಸಿ ಈ ೫೩ ಸಂಸ್ಥೆಗಳವರು ಏನು ಕಟ್ಟಡವನ್ನು ಕಟ್ಟಿದ್ದಾರೆ, ಅವುಗಳನ್ನು ಕೆಡವುದಕ್ಕಂತೂ ಆಗುವುದಿಲ್ಲ. ಅದು ಸಾರ್ವಜನಿಕರ ಸಂಪತ್ತಾಗಿದೆ. ಆ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಒತ್ತಾಯ

ವಹಾಡುತ್ತಿದ್ದೇನೆ ; ಈ ಕೂಡಲೇ ಆ ಸರ್ವ ಸದಸ್ಯರು ತಮ್ಮ ಮೇಲೆ ಏನು ಪ್ರಭಾವವನ್ನು ಬೀರಿದ್ದಾರೆ, ಕೂಡಲೇ ಇದಕ್ಕೆ ತಿದ್ದುಪಡಿಯನ್ನು ತಂದು, ಅವರಿಗೆ ಸರ್ಕಾರ ಒಂದು ಅವಕಾಶ ವಹಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು ನಾನು ತಂದಿರತಕ್ಕ ವಿಧೇಯಕವನ್ನು ವಾಪಸ್ಸು ಪಡೆಯುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಬೆಟ್ಟ ಅಗೆದು ಇಲಿ ಹಿಡಿದಂತೆ ಆಯಿತು.

ಶ್ರೀ ಎಂ. ಪಿ. ವೆಂಕಟೇಶ್ ವಹಾನ್ಯ ಸದಸ್ಯರು ಬಹಳ ಆತುರಾತುರದಿಂದ ತಂದು ಈಗ ವಾಪಸ್ಸು ಹಡೆದಿದ್ದಾರೆ. ಸರ್ವಾನುಮತದಿಂದ ಎಲ್ಲರೂ ಒಪ್ಪಿದ್ದರೂ ಸಹ ಬಹಳ ಸುಲಭವಾಗಿ ವಾಪಸ್ಸು ತೆಗೆದುಕೊಂಡಿದ್ದಾರೆ. ನಮ್ಮ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಇವರು ಯಾವಾಗ ಇಡುತ್ತಾರೆ, ಯಾವಾಗ ವಾಪಸ್ಸು ತೆಗೆದುಕೊಳ್ಳುತ್ತಾರೋ ಏನೂ ಗೊತ್ತಾಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ಇದರ ಬಗ್ಗೆ ಸರ್ಕಾರಕ್ಕೆ ಗಮನ ಇದೆ ; ಎಲ್ಲರೂ ಸರ್ಕಾರದ ಗಮನ ಸೆಳೆದಿದ್ದಾರೆ, ಆದಕ್ಕಾಗಿ ವಹಾನ್ಯ ಸದಸ್ಯರಿಗೆ ಗೌರವ ಕೊಡಬೇಕು ಎನ್ನತಕ್ಕ ಉತ್ಸಾಹದಿಂದ ಹಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಕೂಡಲೇ ಇದಕ್ಕೆ ತಿದ್ದುಪಡಿ ತರುವುದಾಗಿ ಹೇಳಿದ್ದಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಇಷ್ಟು ದಿವಸದಲ್ಲಿ ವಹಾಡುತ್ತೇವೆ, ಇಷ್ಟು ತಿಂಗಳಲ್ಲಿ ವಹಾಡುತ್ತೇವೆಂದು ಅವರು ಹೇಳಲೇ ಇಲ್ಲ, ಆಗಲೇ ನೀವು ವಾಪಸ್ಸು ತೆಗೆದುಕೊಂಡುಬಿಟ್ಟಿದ್ದೀರಿ.

ಶ್ರೀ ಟಿ. ಎಂ. ಮಂಜುನಾಥ್.—ಸರ್ಕಾರದ ಮೂಲ ಉದ್ದೇಶವನ್ನು ಅವರು ಹೇಳಿದ್ದಾರೆ. ಇದಕ್ಕೆ ಅನ್ಯಾಯವಾಗದ ರೀತಿಯಲ್ಲಿ ಕೂಡಲೇ ತಿದ್ದುಪಡಿಯನ್ನು ತರುತ್ತೇವೆ ಎನ್ನತಕ್ಕ ಆಶ್ವಾಸನೆಯನ್ನು ವಹಾನ್ಯ ಮಂತ್ರಿಗಳು ಕೊಟ್ಟಿರುವುದರಿಂದ,

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ೧೯೯೦ಕ್ಕೆ ತಂದಿರತಕ್ಕ ನನ್ನ ತಿದ್ದುಪಡಿಯನ್ನು ವಾಪಸು ಪಡೆಯುತ್ತೇನೆ.

ಅಧ್ಯಕ್ಷರು,— ಪ್ರಸ್ತಾವ ಏನೆಂದರೆ,

"ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ೧೯೯೦ಕ್ಕೆ ತಂದಿರತಕ್ಕ ತಿದ್ದುಪಡಿಯನ್ನು ಸದಸ್ಯರು ವಾಪಸು ಪಡೆಯಲು ಅನುಮತಿ ನೀಡುವುದು,"

(ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ವಹಾನ್ಯ ಸದಸ್ಯರಿಗೆ ತಿದ್ದುಪಡಿಯನ್ನು ವಾಪಸು ಪಡೆಯಲು ಅನುಮತಿ ನೀಡಲಾಯಿತು).

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೇ, ಇದನ್ನು ಅದಷ್ಟು ಬೇಗ ವಹಾಡಿದರೆ ಒಳ್ಳೆಯದಂ. ಏಕೆಂದರೆ, ಇಲ್ಲಿಗೆ ಬೇರೆ ಕಡೆಯವರೆಲ್ಲಾ ಬಂದಿದ್ದಾರೆ. ನಮ್ಮ ಕಡೆಯವರಿಗೆ ಸಿಕ್ಕಿಲ್ಲ. ಮಂಗಳೂರಿಗೆ ಹೋಗಿ ನೋಡಿದರೆ ಅಲ್ಲಿ ಗಂಡ್ಡದ ರೀತಿಯಲ್ಲಿ ಬಿದ್ದಿದೆ. ಆದ್ದರಿಂದ, ದಯವಿಟ್ಟು ನ್ಯಾಷನಲೈಸ್ ವಹಾಡಿದರೆ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ. ಅಮೌಂಟ್ ಕೂಡಾ ಸಿಕ್ಕುತ್ತದೆ. ಆದುದರಿಂದ, ಇದನ್ನು ದಯವಿಟ್ಟು ಸರ್ವಾನುಮತದಿಂದ ಪಾಸ್ ವಹಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಯಾವುದನ್ನು ಸರ್ವಾನುಮತದಿಂದ ಪಾಸ್ ವಹಾಡಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಎನ್. ಜಿ. ನಾಯಕ್.—ಅಧ್ಯಕ್ಷರೆ, ಇದನ್ನು ನ್ಯಾಷನಲೈಸ್ ವಹಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಟಿ. ಎಂ. ಮಂಜುನಾಥ್.—ಅಧ್ಯಕ್ಷರೆ, ಅವರು ಯಾವ ತಾರೀಖಿನಲ್ಲಿ ವಹಾಡುತ್ತಾರೆ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು.—ಅವರು ವಾಪಸು ತೆಗೆದುಕೊಂಡ ಮೇಲೆ ಈಗ ನೀವು ಕೇಳತಕ್ಕಂಥಾದ್ದು ಏನಿದೆ ? ಈಗ ಖಾಸಗಿ ಕಾರ್ಯಕಲಾಪಗಳು. ವಹಾನ್ಯ ವೆಂಕಟೇಶ್‌ರವರು ತಮ್ಮ ಭಾಷಣವನ್ನು ಮುಂದುವರಿಸಬಹುದು. ತಾವು ಜಾಗ್ರತೆ ಮುಗಿಸಿ.